**ಸಾಕ್ಷಿಯನ್ನು ದಿನಾಂಕ 22.08.2024 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀಸವಾಲುಃ 1 ನೇ ಆರೋಪಿತರ ಪರ ಶ್ರೀ ಎನ್.ಎನ್. ಹೆಚ್., ವಕೀಲರಿಂದ.**

46. ಮಂಗಳೂರು ಕಾರಾಗೃಹದಲ್ಲಿ ಒಲ್ಡ್ ಮತ್ತು ನಿವ್ ಬ್ಲಾಕ್ ಎಂಬ ಎರಡು ಬ್ಲಾಕ್ ಗಳು ಇರುತ್ತವೆ. ಎರಡೂ ಬ್ಲಾಕ್ ಗಳು ಒಂದೇ ಕಾಂಪೌಂಡಿನ ಒಳಗೆ ಇರುತ್ತವೆ. 2012 ರಿಂದ ನಿವ್ ಬ್ಲಾಕ್‌ನ್ನು ನಾವು ಉಪಯೋಗಿಸುತ್ತಿದ್ದೇವೆ. ಕಾರಾಗೃಹಕ್ಕೆ ಬೇಕಾದ ಎಲ್ಲ ಸುರಕ್ಷಾ ವ್ಯವಸ್ಥೆಗಳನ್ನು ಹೊಸ ಬ್ಲಾಕ್ ನಲ್ಲಿ ಅಳವಡಿಸಲಾಗಿರುತ್ತದೆ. ಹೊಸ ಬ್ಲಾಕನ್ನು ಕಟ್ಟುವಾಗ ಹಳೆಯ ಕಟ್ಟಡದ ನ್ಯೂನ್ಯತೆಗಳನ್ನು ಸಹ ಸರಿಪಡಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಹೊಸ ಬ್ಲಾಕನ್ನು ನಿರ್ಮಾಣ ಮಾಡುವ ವೇಳೆಗೆ ಮಂಗಳೂರು ಜಿಲ್ಲಾ ಕಾರಾಗೃಹದ ಎಲ್ಲ ವ್ಯವಸ್ಥೆಗಳನ್ನು ಸರಿಪಡಿಸಲಾಗಿರುತ್ತದೆ ಎಂದರೆ ಸರಿಯಲ್ಲ.

47. 2012 ರಲ್ಲಿ ಹೊಸ ಬ್ಲಾಕ್ ಪ್ರಾರಂಬಿಸುವ ವೇಳೆಗೆ ಸಂಪೂರ್ಣ ಕಾರಾಗೃಹಕ್ಕೆ ಸಿಸಿ ಟಿ.ವಿ ಕಂಗಾವಲು ವ್ಯವಸ್ಥೆಯನ್ನು ಅಳವಡಿಸಲಾಗಿದೆ ಎಂದರೆ ಸರಿಯಲ್ಲ. ಸಾಕ್ಷಿಗೆ ಎರಡೂ ಕಟ್ಟಡಗಳಿಗೆ ಸಂಬಂಧಿಸಿದಂತೆ ಸಿಸಿ ಟಿ.ವಿ ದೃಶ್ಯಾವಳಿಗಳನ್ನು ನೋಡುವ ವ್ಯವಸ್ಥೆ ಇರುವ ಮಾನಿಟರ್ ಗಳು ಹೊಸ ಕಟ್ಟಡದ ತಮ್ಮ ಕಚೇರಿಯಲ್ಲಿ ಇರುತ್ತವೆ ಎಂದು ಪ್ರಶ್ನಿಸಲಾಗಿ, ಸಾಕ್ಷಿ ಹೊಸ ಕಟ್ಟಡಕ್ಕೆ ಮಾತ್ರ ಸಿಸಿ ಟಿವಿ ಯನ್ನು ಆ ಕಾಲಕ್ಕೆ ಅಳವಡಿಸಿದ್ದು, ಅವುಗಳಿಗೆ ಸಂಬಂದಿಸಿದ ಮಾನಿಟರ್ ಹೊಸ ಕಟ್ಟಡದ ನನ್ನ ಕಚೇರಿಯಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು 2016-17 ರಲ್ಲಿ ಹಳೆಯ ಕಟ್ಟಡಕ್ಕೂ ಸಹ ಸಿಸಿ ಟಿವಿ ಕಂಗಾವಲು ವ್ಯವಸ್ಥೆಯನ್ನು ಅಳವಡಿಸಿಕೊಂಡಿರುತ್ತೇವೆ ಮತ್ತು ಸದರಿ ದೃಶ್ಯಾವಳಿಗಳನ್ನು ನೋಡುವ ಮಾನಿಟರ್ ಸಹ ಹೊಸ ಕಟ್ಟಡದ ನನ್ನ ಕಚೇರಿಯಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ.

48. 2012 ರಲ್ಲಿ ಹೊಸ ಮತ್ತು ಹಳೆಯ ಬ್ಲಾಕ್ ಗಳಲ್ಲಿ ಸಿಸಿ ಟಿ.ವಿ ವ್ಯವಸ್ಥೆಯನ್ನು

ಮಾಡಲಾಗಿತ್ತು ಎಂದರೆ ಸರಿಯಲ್ಲ. ಸದರಿ ಸಿಸಿ ಟಿ.ವಿಯಲ್ಲಿ ದಿನಾಂಕ 02.11.2015 ರ ಸಂಪೂರ್ಣ ದೃಶ್ಯಾವಳಿಗಳು ಇರುತ್ತವೆ ಎಂದು ಪ್ರಶ್ನಿಸಲಾಗಿ, ಸಾಕ್ಷಿ ಹಳೆಯ ಬ್ಲಾಕನಲ್ಲಿ ಆ ವೇಳೆಗೆ ಸಿಸಿ ಟಿ.ವಿ ಗಳನ್ನು ಅಳವಡಿಸಿರಲಿಲ್ಲ ಎಂದು ನುಡಿಯುತ್ತಾರೆ. ನ್ಯಾಯಾಲಯದ ಮುಂದೆ ಹಾಜರುಪಡಿಸಲಾದ ಸಾಕ್ಷ್ಯಕ್ಕೂ ಮತ್ತು ಸಿಸಿ ಟಿ.ವಿಯಲ್ಲಿರುವ ದೃಶ್ಯಾವಳಿಗಳಿಗೂ ವ್ಯತ್ಯಾಸವಿರುವ ಕಾರಣ ಹಳೆಯ ಬ್ಲಾಕಗೆ ಸಿಸಿ ಟಿ.ವಿ ಅಳವಡಿಸಿರಲಿಲ್ಲ ಎಂದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

49. ಪ್ರಥಮವಾಗಿ ಘಟನೆ ಬೆಳಿಗ್ಗೆ 07.45 ರಿಂದ 07.50 ವೇಳೆಗೆ ಪ್ರಾರಂಭವಾಗಿರುತ್ತದೆ. ಮಾಡೂರು ಯುಸೂಫ ಮತ್ತು ಗಣೇಶ ಶೆಟ್ಟಿ ರವರುಗಳನ್ನು ಬೆಳಿಗ್ಗೆ 08.15 ರಿಂದ 08.30 ರ ಒಳಗಾಗಿ ನಾವು ಜಿಲ್ಲಾ ಕಾರಾಗೃಹದಿಂದ ಆಸ್ಪತ್ರೆಗೆ ಸಾಗಿಸಿದ್ದೆವು. ಮಾಡೂರು ಯೂಸುಫನ ಮೇಲೆ ಹಲ್ಲೆ ಮಾಡಿದವರು ಹಲ್ಲೆ ಮಾಡಲು ಬಳಸಿದ ಆಯುಧಗಳನ್ನು ಸ್ಥಳದಲ್ಲಿಯೇ ಬಿಸಾಡಿ ಹೋಗಿದ್ದಾರೆ ಎಂದು ನೀವು ನಿಮ್ಮ ದೂರಿನಲ್ಲಿ ನಮೂದಿಸಿದ್ದೀರಿ ಎಂದು ಪ್ರಶ್ನಿಸಲಾಗಿ, ಸಾಕ್ಷಿ ಹೌದು ಎಂದು ಉತ್ತರಿಸಿರುತ್ತಾರೆ. ಆಯುಧಗಳು ಕಾರಾಗೃಹದ ಖೈದಿಗಳಿಗೆ ಸಿಗುವಂತೆ ಇರುವುದು ಬೇಡ ಎಂದು ಅವುಗಳನ್ನು ಸೂಕ್ತವಾದ ಸ್ಥಳದಲ್ಲಿ ತೆಗೆದುಕೊಂಡು ಹೋಗಿ ಇಡುವ ಪ್ರಯತ್ನ ಮಾಡಿದ್ದಿರಾ ಎಂದು ಪ್ರಶ್ನಿಸಲಾಗಿ, ಸಾಕ್ಷಿ ನಾವು ಆ ವೇಳೆಗೆ ಮೂರು ಜನ ಸಿಬ್ಬಂದಿಗಳು ಇದ್ದು, ಗಾಯಾಳುವಿನ ಜೀವರಕ್ಷಣೆ ಮಾಡುವ ಪ್ರಯತ್ನಕ್ಕೆ ಮೊದಲ ಆದ್ಯತೆ ನೀಡಿದ್ದೇವೆ ಎಂದು ನುಡಿಯುತ್ತಾರೆ.

50. ದಿನಾಂಕ 02.11.2015 ರಂದು ಬೆಳಿಗ್ಗೆ 07.30 ಗಂಟೆಯ ವೇಳೆಗೆ ಕಾರಾಗೃಹದಲ್ಲಿ ಒಟ್ಟು 8 ಜನ ಸಿಬ್ಬಂದಿಗಳು ಇದ್ದರು. ಸಾಕ್ಷಿಗೆ ಹೊಸ ಬ್ಲಾಕಿನಲ್ಲಿದ್ದ ಖೈದಿಗಳು ಆ ವೇಳೆಗೆ ಕಾರಾಗೃಹದ ಸೆಲ್ ಅಥವಾ ಬ್ಯಾರಾಕುಗಳ ಒಳಗೆ ಇದ್ದರಾ ಎಂದು ಪ್ರಶ್ನಿಸಲಾಗಿ, ಸಾಕ್ಷಿ ಬೆಳಿಗ್ಗೆ

07.30 ಗಂಟೆಗೆ ನಿತ್ಯಕರ್ಮ ಮುಗಿಸಲು ಖೈದಿಗಳನ್ನು ನಾವು ಸೆಲ್ ಅಥವಾ ಬ್ಯಾರಾಕಿನಿಂದ ಕ್ರಮವಾಗಿ ಅಂದರೆ ಒಂದರ ನಂತರ ಇನ್ನೊಂದನ್ನು ತೆರೆದು ಖೈದಿಗಳನ್ನು ಹೊರಗೆ ಬಿಡುತ್ತೇವೆ ಎಂದು ನುಡಿಯುತ್ತಾರೆ.

51. ದಿನಾಂಕ 02.11.2015 ರಂದು ಮಾಡೂರು ಯುಸೂಫ ನ್ಯಾಯಾಲಯದ ಯಾವ ಪ್ರಕರಣದಲ್ಲಿ ಹಾಜರಾಗಲು ವಾಯಿದೆ ಇತ್ತು ಎಂದು ನಾನು ನನ್ನ ದೂರಿನಲ್ಲಿ, ನನ್ನ ಹೇಳಿಕೆಯಲ್ಲಿ ಅಥವಾ ನನ್ನ ಮುಖ್ಯವಿಚಾರಣೆಯಲ್ಲಿ ತಿಳಿಸಿರುವುದಿಲ್ಲ. ಖೈದಿಗಳನ್ನು ಯಾವ ದಿನಾಂಕದಂದು ನ್ಯಾಯಾಲಯಕ್ಕೆ ಹಾಜರುಪಡಿಸಬೇಕು ಎನ್ನುವ ಬಗ್ಗೆ ಮಾಹಿತಿಯ ಲಿಸ್ಟ್ ನನ್ನ ಕಚೇರಿಯಲ್ಲಿ ಇರುತ್ತದೆ. ಗಣೇಶ ಶೆಟ್ಟಿಗೆ ಆ ದಿನ ನ್ಯಾಯಾಲಯದಲ್ಲಿ ಹಾಜರಾಗಲು ವಾಯಿದೆ ಇರಲಿಲ್ಲ. ಗಣೇಶ ಶೆಟ್ಟಿ ಆ ದಿನ ಅವನ ಸೆಲ್‌ನಿಂದ ಹೊರಗೆ ಬಿಡುವಂತೆ ನನ್ನನ್ನು ಕೋರಿಕೊಂಡಿಲ್ಲ. ಸಾಕ್ಷಿ ಮಾಡೂರು ಯುಸೂಫನ ಸೆಲ್ ನಲ್ಲಿ 3 ಜನರು ಇದ್ದು, ಗಣೇಶ್ ಶೆಟ್ಟಿ ಸೆಲ್‌ನಲ್ಲಿ ಇಬ್ಬರಿದ್ದು, ಬೇರೆ ಬ್ಯಾರಾಕುಗಳಲ್ಲಿ 25-30 ಜನ ಖೈದಿಗಳಿದ್ದ ಕಾರಣ ಒಟ್ಟಿಗೆ ನಿತ್ಯಕರ್ಮ ಮುಗಿಸಬೇಕೆಂದು ಗಣೇಶ ಶೆಟ್ಟಿ ಮತ್ತು ಮಾಡೂರು ಯುಸೂಫ ಇದ್ದ ಸೆಲ್‌ಗಳನ್ನು ಒಟ್ಟಿಗೆ ತೆರೆದಿದ್ದೆವು ಎಂದು ನುಡಿಯುತ್ತಾರೆ.

52. ನಾನು ಗಣೇಶ ಶೆಟ್ಟಿಯನ್ನು ಮಾಡೂರು ಯುಸೂಫ ನನ್ನು ಹೊರಗೆ ಬಿಟ್ಟ ವೇಳೆಗೆ ಸೆಲ್ ನಿಂದ ಯಾವ ಕಾರಣಕ್ಕಾಗಿ ಹೊರಗೆ ಬಿಟ್ಟಿದ್ದೆ ಎನ್ನುವ ವಿಷಯವನ್ನು ದೂರಿನಲ್ಲಿ, ಪೊಲೀಸರ ಮುಂದಿನ ಹೇಳಿಕೆಯಲ್ಲಿ ಮತ್ತು ಮುಖ್ಯವಿಚಾರಣೆಯಲ್ಲಿ ತಿಳಿಸಿಲ್ಲ. ಈ ಪ್ರಕರಣದಲ್ಲಿ ಸಾಕ್ಷಿಗಳು ಪೊಲೀಸರ ಮುಂದಿನ ಹೇಳಿಕೆಯಲ್ಲಿ ಮಾಡೂರು ಯುಸೂಫ ಮತ್ತು ಗಣೇಶ ಶೆಟ್ಟಿಯನ್ನು ಇರಿಸಲಾಗಿದ್ದ ಸೆಲ್‌ಗಳು ಯಾವಾಗಲೂ ತೆರೆದೇ ಇರುತ್ತಿದ್ದವು ಎಂದು ಹೇಳಿದ್ದರೆ ಅದು ಸರಿಯಲ್ಲ. ಗಣೇಶ್ ಶೆಟ್ಟಿ ಮತ್ತು ಮಾಡೂರು ಯುಸೂಫ ರವರುಗಳು

ಯಾವಾಗಲೂ ಜೊತೆಯಾಗಿ ಮೊದಲು ವಾಕ್ ಮಾಡುತ್ತಿದ್ದರು ಎಂದು ಹೇಳಿಕೆ ನೀಡಿದ್ದಾರೆ ಎಂದು ಪ್ರಶ್ನಿಸಲಾಗಿ, ಸಾಕ್ಷಿ ಒಟ್ಟಿಗೆ ಅವರನ್ನು ಹೊರಗೆ ಬಿಡುತ್ತಿದ್ದ ಕಾರಣ ಅವರು ಒಟ್ಟಾಗಿ ವಾಕ್ ಮಾಡುತ್ತಿದ್ದರು ಎಂದು ನುಡಿಯುತ್ತಾರೆ.

53. ಮಾಡೂರು ಯುಸೂಫ ನನ್ನ ಬಳಿ ಬಂದು ನ್ಯಾಯಾಲಯಕ್ಕೆ ಹೋಗಲು ಇದೆ ನನ್ನ ಸೆಲ್ ನ್ನು ತೆರೆಯಲು ಹೇಳಿ ಎಂದು ನನ್ನ ಬಳಿ ಹೇಳಿದ ಎಂದು ನಾನು ದೂರಿನಲ್ಲಿ ನಮೂದಿಸಿಲ್ಲ. ಮಾಡೂರು ಯುಸೂಫನಿಗೆ ಆ ದಿನ ನ್ಯಾಯಾಲಯದ ವಾಯಿದೆ ಇರಲಿಲ್ಲ ಮತ್ತು ಮಾಡೂರು ಯುಸೂಫ ಜೈಲಿನ ವಾರ್ಡರ್ ಹಿಂದಿನಮನಿ ಮೂಲಕ ನ್ಯಾಯಾಲಯಕ್ಕೆ ಹೋಗಲು ಸೆಲ್ ನ್ನು ತೆರೆಯುವಂತೆ ನನ್ನ ಬಳಿ ಹೇಳಿಲ್ಲ ಎಂದರೆ ಸರಿಯಲ್ಲ. ನಾನು ಕಾರಾಗೃಹದಲ್ಲಿ ದೂರನ್ನು ಸುಮಾರು ಬೆಳಿಗ್ಗೆ 11.30 ಗಂಟೆಗೆ ನೀಡಿರುತ್ತೇನೆ. ನಾನು ದೂರು ನೀಡುವ ವೇಳೆಗೆ ಮಾಡೂರು ಯುಸೂಫ ಮತ್ತು ಗಣೇಶ ಶೆಟ್ಟಿ ಮೃತಪಟ್ಟ ವಿಚಾರ ನನಗೆ ತಿಳಿದಿತ್ತು.

54. ಮಾಡೂರು ಯುಸೂಫನನ್ನು ಸೆಲ್ ನಿಂದ ಕಾರಾಗೃಹದ ಗೇಟ್‌ನ ವರೆಗೆ ಕರೆದುಕೊಂಡು ಹೋಗಲು ಕೆಲವು ಖೈದಿಗಳು ನಮಗೆ ಸಹಕಾರ ನೀಡಿರುತ್ತಾರೆ. 5 ನೇ ಸೆಲ್ ನಿಂದ ಗಾಯಾಳು ಮಾಡೂರು ಯುಸೂಫ ನನ್ನು ಆ್ಯಂಬುಲೆನ್ಸ್‌ಗೆ ಕರೆದುಕೊಂಡು ಹೋಗುವವರೆಗೆ ರಕ್ತ ಬಿಳುತ್ತಿತ್ತು ಎಂದರೆ ಸರಿ. ಗಾಯಾಳು ಗಣೇಶ ಶೆಟ್ಟಿಯನ್ನು ಸಹ ಕಾರಾಗೃಹದ ಖೈದಿಗಳು ಅಂದರೆ ಆರೋಪಿಗಳು ಸಹ ಗಾಯವಾದ ಸ್ಥಳದಿಂದ ಆ್ಯಂಬುಲೆನ್ಸ್ ವರೆಗೆ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಆ ವೇಳೆಗೆ ಸಿಬ್ಬಂದಿಗಳು ಮತ್ತು ಪೊಲೀಸರು ಕಾರಾಗೃಹದಲ್ಲಿ ಇದ್ದೆವು ಎಂದು ನುಡಿಯುತ್ತಾರೆ.

55. ಮೊದಲು ಮಾಡೂರು ಯುಸೂಫನನ್ನು ಮತ್ತು ನಂತರ ಗಣೇಶ ಶೆಟ್ಟಿಯನ್ನು

ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಲಾಗಿರುತ್ತದೆ. ಗಣೇಶ್ ಶೆಟ್ಟಿ ಆಸ್ಪತ್ರೆಗೆ ತಲುಪುವ ಮೊದಲೇ ಈ ಪ್ರಕರಣದ 1 ನೇ ಆರೋಪಿ ಮಹಮ್ಮದ್ ಇಕ್ಬಾಲ್ ತನಗೆ ಆದ ತೀವ್ರ ಗಾಯಗಳಿಗೆ ಚಿಕಿತ್ಸೆ ಪಡೆಯಲು ಆಸ್ಪತ್ರೆಗೆ ದಾಖಲಾಗಿದ್ದ ಎಂದರೆ ಸರಿಯಲ್ಲ. ಮಹಮ್ಮದ್ ಇಕ್ಬಾಲನಿಗೆ ಯಾರಿಂದ ಮತ್ತು ಎಲ್ಲಿಗೆ ಹಲ್ಲೆಯಾಗಿದೆ ಎನ್ನುವ ಬಗ್ಗೆ ನಾನು ಪೊಲೀಸರ ಮುಂದಿನ ನನ್ನ ಹೇಳಿಕೆಯಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ.

56. ನಾನು ಪೊಲೀಸರ ಮುಂದೆ ನೀಡಿದ ಹೇಳಿಕೆಗೂ ಮತ್ತು ನ್ಯಾಯಾಲಯದಲ್ಲಿ ಸಾಕ್ಷ್ಯಕ್ಕೂ ಸಂಪೂರ್ಣ ವ್ಯತಿರಿಕ್ತ ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸಂದಿಗ್ದ ಪರಿಸ್ಥಿತಿಯಲ್ಲಿ ನಾನು ಒತ್ತಡಕ್ಕೆ ಒಳಗಾಗಿದ್ದ ಕಾರಣ ಸ್ವಲ್ಪ ವ್ಯತ್ಯಾಸವಾಗಿರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿ ನೀವು ಹಿರಿಯ ಪೊಲೀಸ್ ಅಧಿಕಾರಿ ಆಗಿರುವ ಕಾರಣ ಯಾವುದೇ ಸಂದಿಗ್ದ ಪರಿಸ್ಥಿತಿಯನ್ನು ನಿಭಾಯಿಸುವ ಚಕ್ಯಚಾಕ್ಯತೆಯನ್ನು ಹೊಂದಿದ್ದೀರಿ ಎಂದು ಪ್ರಶ್ನಿಸಲಾಗಿ, ಸಾಕ್ಷಿ ನಾನು ಸಹ ಮನುಷ್ಯನೇ ಎಂದು ನುಡಿಯುತ್ತಾರೆ. ನಮ್ಮ ಕಾರಾಗೃಹದ ಸಿಬ್ಬಂದಿಗಳ ಲೋಪದೋಷವನ್ನು ಮುಚ್ಚಿ ಹಾಕಲು ನಾನು ಮತ್ತು ಈ ಪ್ರಕರಣದ ತನಿಖಾಧಿಕಾರಿಗಳು ಸೇರಿ ದಿನಾಂಕ 03.11.2015 ರಂದು ಹಿಂದಿನಮನಿಯವರ ಮೂಲಕ ನಿಪಿ-1 ರಂತೆ ದೂರನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

57. ಗಣೇಶ ಶೆಟ್ಟಿ ಇದ್ದ 4 ನೇ ನಂಬರ್ ಸೆಲ್‌ನಲ್ಲಿ ನಮ್ಮ ದಾಖಲೆಗಳಂತೆ ಇನ್ನೊಬ್ಬ ಖೈದಿ ಇದ್ದ ಬಗ್ಗೆ ಕಂಡುಬರುತ್ತದೆ. ಗಣೇಶ್ ಶೆಟ್ಟಿ ಜೊತೆಯಲ್ಲಿದ್ದ ಖೈದಿಯ ಹೆಸರು ಮಹೇಶ ಎಂದು ಸಾಕ್ಷಿ ನುಡಿಯುತ್ತಾರೆ. ಸಮಗ್ರ ಘಟನೆಯಲ್ಲಿ ಸದರಿ ಮಹೇಶ ಘಟನೆಯನ್ನು ನೋಡಿದ ಬಗ್ಗೆ ಅಥವಾ ಘಟನೆಯನ್ನು ತಡೆಯಲು ಪ್ರಯತ್ನಿಸಿದ ಬಗ್ಗೆ ಅಥವಾ ತಟಸ್ಥವಾಗಿ ಇದ್ದ ಬಗ್ಗೆ ನಮೂದು ಇರುವುದಿಲ್ಲ. ಗಣೇಶ್ ಶೆಟ್ಟಿಯವರ ಕೊಲೆಗೂ ಹಾಗೂ 1 ನೇ ಆರೋಪಿಗೂ

ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿತನನ್ನು ಸುಳ್ಳು ಕಥೆ ಸೃಷ್ಟಿ ಮಾಡಿ ಪ್ರಕರಣದಲ್ಲಿ ಸಿಲುಕಿಸಲಾಗಿದೆ ಎಂದರೆ ಸರಿಯಲ್ಲ.

58. ನಿಮ್ಮ ದೂರಿನಲ್ಲಿ ಮಾಡೂರು ಯುಸೂಫ ಮತ್ತು ಗಣೇಶ ಶೆಟ್ಟಿಯ ಮೇಲೆ ಹಲ್ಲೆಯಾಗುವ ವೇಳೆಗೆ ತಡೆಯಲು ಪ್ರಯತ್ನಿಸಿದಾಗ 1 ನೇ ಆರೋಪಿ ಮಹಮ್ಮದ್ ಇಕ್ಬಾಲ್ ಮೇಲೆ ಹಲ್ಲೆಯಾಗಿರುತ್ತದೆ ಎಂದು ನಮೂದಿಸಿರುತ್ತೀರಿ ಎಂದು ಪ್ರಶ್ನಿಸಲಾಗಿ, ಸಾಕ್ಷಿ ತಪ್ಪು, ಮಾಡೂರು ಯುಸೂಫನ ಮೇಲೆ ಹಲ್ಲೆಯಾಗುವ ವೇಳೆಗೆ ಮಾತ್ರ 1 ನೇ ಆರೋಪಿಯ ಮೇಲೆ ಹಲ್ಲೆಯಾಗಿರುತ್ತದೆ ಮತ್ತು ಸಣ್ಣ ಪುಣ್ಣ ಗಾಯಗಳು ಆಗಿರುತ್ತದೆ ಎಂದು ನುಡಿಯುತ್ತಾರೆ. ಕಾರಾಗೃಹದಲ್ಲಿ ಆ ದಿನ ದೊಂಬಿ ರೀತಿಯ ಘಟನೆಯಿಂದ ಈ ಪ್ರಕರಣವಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಮುಖ್ಯವಿಚಾರಣೆಯಲ್ಲಿ 1 ನೇ ಆರೋಪಿತನ ವಿರುದ್ಧ ಸುಳ್ಳು ಸಾಕ್ಷ್ಯ ನೀಡಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ 7, 9, 10, 11 ನೇ ಆರೋಪಿತರ ಪರ ವಕೀಲರಿಂದ.**

ಮೇಲಿನ ಪಾಟೀಸವಾಲನ್ನು ಅಳವಡಿಸಿಕೊಳ್ಳುವುದಾಗಿ ನುಡಿದಿರುತ್ತಾರೆ.

**ಪಾಟೀಸವಾಲುಃ 2 ಮತ್ತು 3ನೇ ಆರೋಪಿತರ ಪರ ಶ್ರೀ ವಿ.ಕೆ. ವಕೀಲರಿಂದ.**

ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓದಿಸಿ ಕೇಳಿ ತಿಳಿದುಕೊಂಡು ಸರಿ ಇದೆ ಎಂದು ಒಪ್ಪಿರುತ್ತಾರೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ದ.ಕ., ಮಂಗಳೂರು.